

بِسْمِ اللهِ الرَّحْمَنِ الرَّحِيمِ

# ಪಾಕಿಸ್ಥಾನದ ಕೊಳಕು ರಾಜಕೀಯ ಹಾಗೂ ಅಹ್ಮದಿಯರ ನಿಲುವು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 13-10-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಖುರ್‌ಆನ್ ವಚನ ತಿಲಾವತ್ ಮಾಡಿದರು:*

مَّا كَانَ مُحَمَّدٌ أَبَا أَحَدٍ مِّن رِّجَالِكُمْ وَلَٰكِن رَّسُولَ اللَّهِ وَخَاتَمَ النَّبِيِّينَ ۗ وَكَانَ اللَّهُ بِكُلِّ شَيْءٍ عَلِيمًا

**ಮಾ ಕಾನ ಮುಹಮ್ಮದುನ್ ಅಬಾ ಅಹದಿನ್ ಮಿನ್ ರ್ರಿಜಾಲಿಕುಮ್ ವಲಾಕಿನ್ ರಸೂಲಲ್ಲಾಹಿ ವ ಖಾತಮನ್ನಬಿಯ್ಯೀನ್. ವಕಾನಲ್ಲಾಹು ಬಿಕುಲ್ಲಿ ಶೈಯಿನ್ ಅಲೀಮ.**

ಮುಹಮ್ಮದ್ ನಿಮ್ಮ ಪೈಕಿ ಯಾವನೇ ಪುರುಷನ ಪಿತ ಅಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕರೂ ಪ್ರವಾದಿಗಳ ಖಾತಮ್ (ಮುದ್ರೆಯೂ) ಆಗಿದ್ದಾರೆ. ಎಲ್ಲಾ ವಿಚಾರಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ. (ಪವಿತ್ರ ಖುರ್‌ಆನ್ 33:41).

ಪಾಕಿಸ್ಥಾನದಲ್ಲಿ ಆಗಾಗ ಯಾವುದಾದರೂ ನೆವನದಿಂದ ರಾಜಕಾರಣಿಗಳೂ ಮತಪಂಡಿತರೂ ಅಹ್ಮದಿಯರ ವಿರುದ್ಧ ಧೂಳೆಬ್ಬಿಸುತ್ತಾ ಇರುತ್ತಾರೆ. ಜನರನ್ನು ತಮ್ಮ ಹಿಂಬಾಲಕರನ್ನಾಗಿ ಮಾಡಲು ಹಾಗೂ ಅವರು ತಮ್ಮೊಂದಿಗೆ ಸಹಮತ ಹೊಂದುವಂತೆ ಮಾಡಲು ಮತ್ತು ಪ್ರಸಿದ್ಧಿಯನ್ನು ಪಡೆಯಲು ಇದು ಅವರ ಯೋಚನೆ ಪ್ರಕಾರ ಎಲ್ಲದಕ್ಕಿಂತಲೂ ಸುಲಭವಾದ ವಿಧಾನವಾಗಿದೆ. ಮುಸ್ಲಿಮರ ಭಾವನೆಗಳನ್ನು ಉದ್ರೇಕಿಸಲು ಬಳಸಬಹುದಾದ ಎಲ್ಲದಕ್ಕಿಂತ ಶಕ್ತಿಶಾಲಿಯಾದ ಆಯುಧ **ಖತ್‌ಮೆನುಬುವ್ವತ್** ಎಂಬ ಆಯುಧವಾಗಿದೆ. ಯಾವುದಾದರೂ ರಾಜಕೀಯ ಪಕ್ಷದ ಖ್ಯಾತಿಗೆ ಕುಂದುಂಟಾಗುವಾಗ, ಜನಪ್ರಿಯತೆಯು ತಗ್ಗುವಾಗ, ಅಥವಾ ಅದರ ಮಟ್ಟ ಕಡಿಮೆಯಾಗುವಾಗ, ಅದೇ ರೀತಿ ಧಾರ್ಮಿಕ ಸಂಘಟನೆ ಎಂಬ ನಾಮಧೇಯವನ್ನು ಹೊಂದಿದ ಸಂಘಟನೆಗಳು ರಾಜಕೀಯ ಪ್ರಸಿದ್ಧಿಯನ್ನು ಗಳಿಸಲು ಬಯಸುವಾಗ, ಇತರ ಸಂಘಟನೆಗಳನ್ನು ಮತ್ತು ರಾಜಕೀಯ ಪಕ್ಷಗಳನ್ನು ಮತ್ತು ರಾಜಕಾರಣಿಗಳನ್ನು ತಮಗಿಂತ ಕೀಳು ಎಂದು ಪ್ರಚಾರ ಮಾಡಲು ಬಯಸುವಾಗ ಅಹ್ಮದಿಯರೊಂದಿಗೆ ಅವರು ಸಂಬಂಧ ಹೊಂದಿರುವರೆಂದು ಪ್ರಚಾರ ಮಾಡುತ್ತಾರೆ. ಅವರು ಹೇಳುತ್ತಾರೆ: ನೋಡಿರಿ, ಎಷ್ಟು ದೊಡ್ಡ ಅನ್ಯಾಯದ ಕೆಲಸ ನಡೆಯುತ್ತಿವೆ. ವಿದೇಶೀ ಶಕ್ತಿಗಳ ಪ್ರಭಾವಕ್ಕೊಳಗಾಗಿ ಈ ಜನರು ಅಹ್ಮದಿಯರನ್ನು ಮುಸ್ಲಿಮರೊಂದಿಗೆ ಸೇರಿಸಲು ಇಚ್ಛಿಸುತ್ತಾರೆ. ಆದರೆ ಅಹ್ಮದಿಯರು ಖತ್‌ಮೆನುಬುವ್ವತ್ತನ್ನು ನಿರಾಕರಿಸುವವರಾಗಿದ್ದಾರೆ ಎಂದು ಬೊಬ್ಬಿಡುತ್ತಾರೆ. ಅವರ ಅಭಿಪ್ರಾಯ ಪ್ರಕಾರ ಅಹ್ಮದೀಯರು ಖತ್‌ಮೆನುಬುವ್ವತ್‌ನ ವಿರೋಧಿಗಳಾಗಿದ್ದಾರೆ.

ಇಸ್ಲಾಮಿನ ಬಗ್ಗೆ ನೋವನ್ನು ಹೊಂದಿದ್ದೇವೆ ಎಂದು ಹೇಳಿಕೊಳ್ಳುವ ಈ ಜನರು, ನಾವು ಪೈಗಂಬರರ ಗೌರವಕ್ಕೆ ಕುಂದುಂಟಾಗಲು ಬಿಡಲಾರೆವು, ಇಂತಹ ಅಕ್ರಮ ಕೃತ್ಯ ನಡೆಯಲು ಅನುಮತಿಸಲಾರೆವು ಎಂದೆಲ್ಲಾ ಹೇಳುತ್ತಾರೆ. ಪ್ರತಿಯೊಬ್ಬರಿಗೆ ಅವರವರ ರಾಜಕೀಯ ಕಾರ್ಯಸೂಚಿಗಳು ಇರುತ್ತವೆ. ಪ್ರತಿಯೊಬ್ಬರಿಗೆ ತಮ್ಮ ಸ್ವಾರ್ಥ ಹಿತಾಸಕ್ತಿಗಳಿವೆ. ಆದರೆ ಅದರ ಮಧ್ಯೆ ಅಹ್ಮದಿಯರ ವಿಷಯವನ್ನು ಬಲಾತ್ಕಾರದಿಂದ ಎಳೆದು ತರಲಾಗುತ್ತಿದೆ. ಏಕೆಂದರೆ ಅದು ಸುಲಭವಾಗಿ ಮಾಡಬಹುದಾದ ಕೆಲಸವಾಗಿದೆ. ಸರಕಾರಿ ಪಕ್ಷದವರೂ ವಿರೋಧ ಪಕ್ಷದವರೂ ನ್ಯಾಶನಲ್ ಅಸೆಂಬ್ಲಿಯಲ್ಲಿ ಒಬ್ಬರಿಗಿಂತ ಮಿಗಿಲಾಗಿ ಇನ್ನೊಬ್ಬರು ಅಹ್ಮದಿಯರ ವಿರುದ್ಧ ಮಾತನಾಡುತ್ತಾರೆ. ಇತ್ತೀಚೆಗೆ ಪಾಕಿಸ್ಥಾನದ ನೇಶನಲ್ ಅಸೆಂಬ್ಲಿಯಲ್ಲಿ ಮಂಡಿಸಲಾದ ಸಂವಿಧಾನ ತಿದ್ದುಪಡಿ ಮಸೂದೆಯ ಕುರಿತು ಚರ್ಚೆ ನಡೆಯುತ್ತಿದ್ದಾಗ ಸರಕಾರಿ ಪಕ್ಷದವರು ತಮ್ಮ ಸ್ವಾರ್ಥ ಹಿತಾಸಕ್ತಿಗೋಸ್ಕರ ಮಾಡಿದ ಭಾಷಣಗಳಲ್ಲಿ ಇದನ್ನೇ ನಾವು ಕಂಡೆವು.

ಅಹ್ಮದಿಯಾ ಜಮಾಅತ್‌ಗೆ ಸಂಬಂಧಿಸಿ ನಾವು ಸ್ಪಷ್ಟಗೊಳಿಸಲು ಬಯಸುವುದೇನೆಂದರೆ, ನಾವು ಯಾವುದೇ ವಿದೇಶಿ ಶಕ್ತಿಗಳೊಂದಿಗೆ, 'ಪಾಕಿಸ್ಥಾನದ ನ್ಯಾಶನಲ್ ಅಸೆಂಬ್ಲಿ ಮೂಲಕ ಸಂವಿಧಾನದಲ್ಲಿ ತಿದ್ದುಪಡಿ ಮಾಡಿಸಿ ನಮ್ಮನ್ನು ಮುಸ್ಲಿಮರೆಂದು ಘೋಷಿಸುವಂತೆ ಮಾಡಬೇಕು' ಎಂದು ಯಾವತ್ತೂ ಅಪೇಕ್ಷಿಸಿಲ್ಲ. ಅದೇ ರೀತಿ ನಾವು ಪಾಕಿಸ್ಥಾನದ ಯಾವುದೇ ಸರಕಾರದೊಂದಿಗೆ ಸಹ ಇದಕ್ಕೋಸ್ಕರ ಎಂದೂ ಭಿಕ್ಷೆ ಬೇಡಲೂ ಇಲ್ಲ. ನಾವು ಮುಸ್ಲಿಮರೆಂದು ಯಾವುದೇ ಅಸೆಂಬ್ಲಿ ಅಥವಾ ಸರಕಾರದಿಂದ ಸರ್ಟಿಫಿಕೇಟನ್ನು ಪಡೆಯಲು ನಮಗೆ ಯಾವ ಆವಶ್ಯಕತೆಯೂ ಇರುವುದಿಲ್ಲ. ನಾವು ನಮ್ಮನ್ನು ಮುಸ್ಲಿಮರೆಂದು ಹೇಳುತ್ತಿರುವುದು ಮತ್ತು ನಾವು ಮುಸ್ಲಿಮರಾಗಿರುವುದು ಅಲ್ಲಾಹನು ಮತ್ತು ಅವನ ಪೈಗಂಬರರು ನಮ್ಮನ್ನು ಮುಸ್ಲಿಮರನ್ನಾಗಿ ಮಾಡಿದುದರಿಂದಾಗಿದೆ. ಆದುದರಿಂದ ನಾವು ಮುಸ್ಲಿಮರಾಗಿದ್ದೇವೆ. ನಾವು **ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್** ಎಂಬ ಕಲಿಮವನ್ನು ಉಚ್ಚರಿಸುವವರಾಗಿದ್ದೇವೆ. ಇಸ್ಲಾಮ್ ಧರ್ಮದ ಐದು ಮೂಲ ತತ್ವಗಳನ್ನು, ಈಮಾನಿನ ಆರು ಅಂಶಗಳನ್ನು ನಾವು

ದೃಢವಾಗಿ ನಂಬುವವರಾಗಿದ್ದೇವೆ. ನಾವು ಪವಿತ್ರ ಖುರ್‌ಆನನ್ನು ನಂಬುವವರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮನ್ನಬಿಯ್ಯೀನ್ ಎಂದು ನಂಬುವವರೂ ಆಗಿದ್ದೇವೆ. ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು ಖಾತಮನ್ನಬಿಯ್ಯೀನ್ ಎಂದು ಹೇಳಿದ ಪ್ರಕಾರ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ದೃಢವಾಗಿ ನಂಬುತ್ತೇವೆ. ನಮ್ಮ ಮೇಲೆ ಇವರು ಹೊರಿಸುತ್ತಿರುವ ಆರೋಪ, ನಾವು ಖತ್‌ಮೆನುಬುವ್ವತ್ತನ್ನು ನಿರಾಕರಿಸುತ್ತೇವೆ (ನಊದು಼ಬಿಲ್ಲಾಹ್), ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮನ್ನಬಿಯ್ಯೀನ್ ಎಂದು ನಂಬುವುದಿಲ್ಲ ಎಂದು ಇವರು ಹೇಳುತ್ತಿರುವುದು ಅತ್ಯಂತ ಕೀಳು ಮಟ್ಟದ ಮತ್ತು ದುಸ್ಸಹವಾದ ಆಪಾದನೆಯಾಗಿದೆ.

ಅನೇಕ ಅರಬಿಗಳು ಸತ್ಯಾಂಶನ್ನು ಅರಿತುಕೊಂಡು ಅಹ್ಮದಿಯರಾಗುತ್ತಿದ್ದಾರೆ. ಅವರು ಹೀಗೆ ಹೇಳುತ್ತಿದ್ದಾರೆ: ನಾವು ನಮ್ಮ ಮತಪಂಡಿತರೊಂದಿಗೆ ಅಹ್ಮದಿಯಾ ಜಮಾಅತ್ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ವಿಚಾರಿಸುತ್ತಿದ್ದಾಗ ಆ ಮತಪಂಡಿತರು ಹೇಳುವುದು, ಅಹ್ಮದಿಯರು ಪವಿತ್ರ ಖುರ್‌ಆನನ್ನು ನಂಬುವುದಿಲ್ಲ, ಅಹ್ಮದಿಯರು ಸ್ವತಃ ಬೇರೆಯೇ ಒಂದು ಖುರ್‌ಆನ್ ರಚಿಸಿದ್ದಾರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಂತಿಮ ಪ್ರವಾದಿ ಎಂದು ನಂಬುವುದಿಲ್ಲ, ಮಿರ್ಝಾ ಸಾಹಿಬರನ್ನು ಕೊನೆಯ ಪ್ರವಾದಿ ಎಂದು ನಂಬುತ್ತಾರೆ, ಅವರ ಹಜ್ಜ್ ಬೇರೆಯೇ ಆಗಿದೆ, ಅವರು ಹಜ್ಜ್ ಮಾಡುವುದೇ ಇಲ್ಲ, ಅವರ ಖಿಬ್ಲ ಸಹ ಬೇರೆಯೇ ಆಗಿದೆ, ಪವಿತ್ರ ಕಅ್‌ಬವನ್ನು ಅಭಿಮುಖೀಕರಿಸಿ ಅವರು ನಮಾಝ್ ಮಾಡುವುದಿಲ್ಲ ಎಂದೆಲ್ಲಾ ಹೇಳುತ್ತಾರೆ. ಆದರೆ ನಾವು ಪರಿಶೋಧಿಸಿದಾಗ ಮತಪಂಡಿತರು ಹೇಳಿದ ಸುಳ್ಳುಗಳು ಬಹಿರಂಗವಾದುವು. ಇಂತಹ ಅಹ್ಮದಿಯೇತರ ಮೌಲವಿಗಳು ತಮ್ಮ ಸುಳ್ಳು ಪ್ರಚಾರದ ಕಾರಣದಿಂದ ಅನೇಕ ಜನರು ಅಹ್ಮದಿಯಾ ಜಮಾಅತಿಗೆ ಸೇರಲು ಕಾರಣೀಭೂತರಾಗುತ್ತಾರೆ. ಈ ಮೌಲವಿಗಳು ಸುಳ್ಳು ಹೇಳುವ ಮೂಲಕ ಒಂದು ರೀತಿಯಲ್ಲಿ ನಮಗೋಸ್ಕರ ತಬ್ಲೀಗ್ ಮಾಡುವವರಾಗುತ್ತಾರೆ.

ನಾವು ಪವಿತ್ರ ಖುರ್‌ಆನನ್ನು ನಂಬದೆ ಇರಲು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ನಂಬದಿರಲು ಹೇಗೆ ತಾನೆ ಸಾಧ್ಯ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವತೀರ್ಣಗೊಂಡ ಇಲ್‌ಹಾಮ್‌ಗಳು ಪವಿತ್ರ ಖುರ್‌ಆನ್ ಅಲ್ಲಾಹನ ಗ್ರಂಥ ಎಂದು ಹೇಳುತ್ತವೆ. ಎಲ್ಲಾ ಒಳಿತುಗಳ ಉದ್ಭವಸ್ಥಾನ ಪವಿತ್ರ ಖುರ್‌ಆನ್ ಎಂದು ಸಹ ಹೇಳುತ್ತವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ಸಹ ಹೇಳುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ದೊರೆತ ಒಂದು ಇಲ್‌ಹಾಮ್ ಹೀಗಿದೆ: **ಅಲ್‌ಖೈರು ಕುಲ್ಲುಹೂ ಫಿಲ್ ಖುರ್‌ಆನ್**. (ಎಲ್ಲ ಒಳಿತುಗಳು ಪವಿತ್ರ ಖುರ್‌ಆನಿನಲ್ಲಿವೆ) ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ್ದಾರೆ: ಪವಿತ್ರ ಖುರ್‌ಆನಿಗೆ ಗೌರವ ನೀಡುವವರು ಆಕಾಶದಲ್ಲಿ ಗೌರವಿಸಲ್ಪಡುವರು ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 'ನನ್ನ ಇಲ್‌ಹಾಮ್‌ಗಳನ್ನು ಗೌರವಿಸಿರಿ' ಎಂದು ಎಲ್ಲಿಯೂ ಹೇಳಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಲ್‌ಹಾಮ್‌ಗಳು ಪವಿತ್ರ ಖುರ್‌ಆನಿನ ಸೇವಕರಾಗಿವೆ. ಅವುಗಳಿಗೆ ಬೇರೆ ಸ್ವತಂತ್ರ ಸ್ಥಾನವಿಲ್ಲ. ನಾವು ಒಳಿತುಗಳಿಗೋಸ್ಕರ, ಮಾರ್ಗದರ್ಶನಗಳಿಗೋಸ್ಕರ, ಸಮಾಜದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲಿಕ್ಕೋಸ್ಕರ ಪವಿತ್ರ ಖುರ್‌ಆನಿನ ಮಾರ್ಗದರ್ಶನಗಳನ್ನು ಮಾತ್ರ ಹುಡುಕುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ದೊರೆತ ಅನೇಕ ಇಲ್‌ಹಾಮ್‌ಗಳು ಅವುಗಳನ್ನು ಸ್ಪಷ್ಟೀಕರಿಸುತ್ತವೆ ಮತ್ತು ವ್ಯಾಖ್ಯಾನಿಸುತ್ತವೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ ಆಗಿರುವರು ಎಂಬುದರ ಬಗ್ಗೆ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಸಂಖ್ಯಾತವಾಗಿ ಬರೆದಿದ್ದಾರೆ. ಅವುಗಳಲ್ಲದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ದೊರೆತ ಒಂದು ಇಲ್‌ಹಾಮ್‌ನಲ್ಲಿ ಸಹ **ಖಾತಮುನ್ನಬಿಯ್ಯೀನ್** ಎಂಬ ಶಬ್ದ ಇದೆ. ಆ ಇಲ್‌ಹಾಮ್ ಹೀಗಿದೆ: **ಸಲ್ಲಿಅಲ ಮುಹಮ್ಮದಿನ್ ವಆಲಿ ಮುಹಮ್ಮದಿನ್ ಸಯ್ಯಿದಿ ಉಲ್‌ದಿ ಆದಮ ವ ಖಾತಮನ್ನಬಿಯ್ಯೀನ್.** (ಆದಮರ ಸಕಲ ಸಂತತಿಯ ನಾಯಕರೂ ಖಾತಮುನ್ನಬಿಯ್ಯೀನರೂ ಆಗಿರುವ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಮತ್ತು ಅವರ ಕುಟುಂಬಕ್ಕೋಸ್ಕರ ದುರೂದ್ ಪ್ರಾರ್ಥನೆ ಮಾಡು.) ಈ ಇಲ್‌ಹಾಮ್ ವಿವಿಧ ಸಮಯಗಳಲ್ಲಿ ಎರಡು ಮೂರು ಸಾರಿ ಅವತೀರ್ಣವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವತೀರ್ಣಗೊಂಡ ಇನ್ನೊಂದು ಇಲ್‌ಹಾಮ್ ಹೀಗಿದೆ: **ಕುಲ್ಲು ಬರ್‌ಕತಿನ್ ಮಿನ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್.** (ಎಲ್ಲಾ ಅನುಗ್ರಹಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ದೊರಕುವುದು). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಗ್ರಂಥವಾದ **ತಜಲ್ಲಿಯಾತೆ ಇಲಾಹಿಯ್ಯ**ದಲ್ಲಿ ಹೀಗೆ ಬರೆದಿದ್ದಾರೆ: ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಯಾಗದೆ ಇರುತ್ತಿದ್ದರೆ ಮತ್ತು ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸದೆ ಇರುತ್ತಿದ್ದರೆ,

ಲೋಕದ ಎಲ್ಲ ಪರ್ವತಗಳಷ್ಟು ನನ್ನ ಕರ್ಮಗಳು ಆಗಿದ್ದರೂ ನಾನು ದೇವವಾಣಿಗಳನ್ನು ಗಳಿಸುವ ಗೌರವವನ್ನು ಪಡೆಯುತ್ತಿರಲಿಲ್ಲ. ಏಕೆಂದರೆ ಈಗ ಮುಹಮ್ಮದೀ ನುಬುವ್ವತ್ತಿನ ಹೊರತು ಬೇರೆ ಎಲ್ಲಾ ನುಬುವ್ವತ್‌ಗಳು ಕೊನೆಗೊಳಿಸಲ್ಪಟ್ಟಿವೆ.

ಆದುದರಿಂದ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಧೀನರಾಗಿರುವವರು ಆಗಿದ್ದಾರೆ. ಅವರ ಇಲ್‌ಹಾಮ್‌ಗಳು ಪವಿತ್ರ ಖುರ್‌ಆನಿಗೆ ಅಧೀನವೂ ಅದರ ವ್ಯಾಖ್ಯಾನವೂ ಆಗಿವೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಲ್‌ಹಾಮ್‌ಗಳನ್ನು (ನಊದು:ಬಿಲ್ಲಾಹ್) ಪವಿತ್ರ ಖುರ್‌ಆನ್‌ಗಿಂತ ಶ್ರೇಷ್ಠವೆಂದು ಭಾವಿಸುವವರಾಗಿದ್ದರೆ ನಾವು ಸಾಂಪತ್ತಿಕ ಬಲಿದಾನ ನೀಡಿ ಲೋಕದ ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಭಾಷಾಂತರಗಳನ್ನು ಪ್ರಕಟಿಸುವ ಬದಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಲ್‌ಹಾಮ್‌ಗಳನ್ನು ಪ್ರಕಟಿಸುತ್ತಿದ್ದೆವು. ಈಗಾಗಲೇ 75 ವಿವಿಧ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಪರಿಪೂರ್ಣ ಭಾಷಾಂತರಗಳನ್ನು ಪ್ರಕಟಿಸಲಾಗಿದೆ. ಕೆಲವು ಬೇರೆ ಭಾಷೆಗಳಲ್ಲಿ ಭಾಷಾಂತರ ಕೆಲಸ ಜಾರಿಯಲ್ಲಿದೆ. ಪವಿತ್ರ ಖುರ್‌ಆನಿನ ಆಯ್ದ ವಚನಗಳ ಭಾಷಾಂತರಗಳು 111 ಭಾಷೆಗಳಲ್ಲಿ ಪ್ರಕಟವಾಗಿವೆ. ದೊಡ್ಡ ದೊಡ್ಡ ಇಸ್ಲಾಮೀ ಸರಕಾರಗಳು ಮತ್ತು ಬಹಳ ಐಶ್ವರ್ಯವಂತರಾದ ಧಾರ್ಮಿಕ ಸಂಘಟನೆಗಳು ಹೇಳಲಿ ಅವರು ಎಷ್ಟು ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಭಾಷಾಂತರಗಳನ್ನು ಪ್ರಕಟಿಸಿರುವರೆಂದು.

ಖಾತಮುನ್ನಬಿಯ್ಯೀನ್ ಎಂದರೇನೆಂದೂ ಅದರ ವಾಸ್ತವಿಕ ಅರ್ಥವನ್ನೂ ಆತ್ಮವನ್ನೂ ಅಹ್ಮದಿಯರಾದ ನಾವು ಮಾತ್ರ ಮನವರಿಕೆ ಮಾಡಿಕೊಂಡಿದ್ದೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ ಆಗಿರುವರು ಎಂಬುದರ ಪ್ರಚಾರವನ್ನು ವಿವಿಧ ದೇಶಗಳಲ್ಲಿ ಆ ದೇಶಗಳ ಸ್ವಂತ ಭಾಷೆಗಳಲ್ಲಿಯೇ ಅಹ್ಮದಿಯರಾದ ನಾವೇ ಮಾಡುತ್ತಿದ್ದೇವೆ. ಹೀಗಿದ್ದರೂ ಈ ಜನರು ನಮ್ಮ ವಿರುದ್ಧ ಆಪಾದನೆ ಮಾಡುತ್ತಾರೆ ನಾವು ಖತ್‌ಮೆನುಬುವ್ವತ್ತನ್ನು ನಿರಾಕರಿಸುತ್ತೇವೆ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಖತ್‌ಮೆನುಬುವ್ವತ್ ಬಗ್ಗೆ ನೀಡಿದ ವಾಸ್ತವಿಕ ಜ್ಞಾನದ ಮಹತ್ವ ಹೇಗಿದೆಯೆಂದರೆ, ಖತ್‌ಮೆನುಬುವ್ವತ್‌ನ ಪತಾಕೆ ಎತ್ತಿಕೊಂಡಿರುವುದಾಗಿ ಹೇಳಿಕೊಳ್ಳುತ್ತಿರುವ ಈ ಜನರಿಗೆ ಅದರ ಸಮೀಪ ಸಹ ತಲಪಲು ಸಾಧ್ಯವಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನ ವಿರುದ್ಧ ಮತ್ತು ನನ್ನ ಜಮಾಅತಿನ ವಿರುದ್ಧವಾಗಿ, ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುವುದಿಲ್ಲ ಎಂಬ ಬೃಹತ್ತಾದೊಂದು ಸುಳ್ಳು ಆರೋಪ ಮಾಡಲಾಗುತ್ತಿದೆ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ಎಷ್ಟು ದೃಢವಾಗಿ ನಂಬುತ್ತೇವೋ ಅದರ ಲಕ್ಷದಲ್ಲಿ ಒಂದು ಪಾಲಷ್ಟು ಸಹ ಅನ್ಯರು ನಂಬುವುದಿಲ್ಲ. ಅವರಿಗೆ ಅಂತಹ ಬುದ್ಧಿಶಕ್ತಿಯೂ ಇರುವುದಿಲ್ಲ. ಖಾತಮುಲ್ ಅಂಬಿಯಾರವರ ಖತ್‌ಮೆನುಬುವ್ವತ್‌ನಲ್ಲಿರುವ ರಹಸ್ಯವೇನೆಂದು ಅವರು ಮನವರಿಕೆ ಮಾಡುವುದೇ ಇಲ್ಲ. ಅವರು ತಮ್ಮ ತಂದೆ ತಾತಂದಿರಿಂದ ಒಂದು ಪದಪುಂಜವನ್ನು ಆಲಿಸಿರುವರೇ ಹೊರತು ಅವರಿಗೆ ಅದರ ವಾಸ್ತವಿಕತೆ ಬಗ್ಗೆ ಅರಿವಿಲ್ಲ. ಖತ್‌ಮೆನುಬುವ್ವತ್ ಎಂದರೇನೆಂದು ಮತ್ತು ಅದನ್ನು ನಂಬುವುದರ ಅರ್ಥ ಏನೆಂದು ಅವರಿಗೆ ತಿಳಿದಿಲ್ಲ. ಆದರೆ ನಾವು ಪೂರ್ಣವಾದ ಪ್ರಜ್ಞೆಯಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುಲ್ ಅಂಬಿಯಾ ಎಂದು ದೃಢವಾಗಿ ನಂಬುತ್ತೇವೆ ಎಂಬುದನ್ನು ಅಲ್ಲಾಹನು ಚೆನ್ನಾಗಿ ಬಲ್ಲನು. ಖತ್‌ಮೆನುಬುವ್ವತ್ ವಾಸ್ತವಿಕವಾಗಿ ಏನೆಂದು ಅಲ್ಲಾಹನು ನಮಗೆ ಸ್ಪಷ್ಟಪಡಿಸಿ ಕೊಟ್ಟಿದ್ದಾನೆ ಮತ್ತು ಅದರ ಬಗ್ಗೆ ಜ್ಞಾನದ ಶರಬತ್ತನ್ನು ನಮಗೆ ಕುಡಿಸಿದ್ದಾನೆ. ಅದರಿಂದ ನಾವು ವಿಶಿಷ್ಟವಾದೊಂದು ರಸಾನುಭೂತಿ ಗಳಿಸುತ್ತೇವೆ. ಆ ಕಾರಂಜಿಯಿಂದು ದಾಹ ನೀಗಿಸಿದವರ ಹೊರತು ಬೇರೆ ಯಾರೂ ಅದನ್ನು ಅಂದಾಜು ಮಾಡಲಾರರು.

ಖತ್‌ಮೆನುಬುವ್ವತ್ ಬಗ್ಗೆ ಮತ್ತೂ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ಅಲ್ಲಾಹನು ನಮಗೆ ಎಂತಹ ಪ್ರವಾದಿಯನ್ನು ನೀಡಿರುವನೆಂದರೆ ಅವರು ಖಾತಮುಲ್ ಮೂಮಿನೀನ್ (ಸತ್ಯವಿಶ್ವಾಸಿಗಳ ಖಾತಮ್), ಖಾತಮುಲ್ ಆರಿಫೀನ್ (ಜ್ಞಾನಿಗಳ ಖಾತಮ್) ಮತ್ತು ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಖಾತಮ್) ಆಗಿರುವರು. ಅವರಿಗೆ ಅವತೀರ್ಣವಾದ ಗ್ರಂಥ ಸಹ ಜಾಮಿಉಲ್ ಕುತುಬ್ (ಗ್ರಂಥಗಳ ಸಂಗ್ರಹ) ಮತ್ತು ಖಾತಮುಲ್ ಕುತುಬ್ (ಗ್ರಂಥಗಳ ಖಾತಮ್) ಆಗಿದೆ. ಖಾತಮುನ್ನಬಿಯ್ಯೀನ್ ಆಗಿರುವ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ನುಬುವ್ವತ್ ಖತ್‌ಮ್ ಆಗಿದೆ (ಕೊನೆಗೊಂಡಿದೆ) ಎಂದರೆ ಅದರ ಅರ್ಥ ಒಬ್ಬನ ಕತ್ತು ಹಿಸುಕಿ ಅವನನ್ನು ಕೊನೆಗೊಳಿಸುವ ಹಾಗಲ್ಲ. ಇಂತಹ ರೀತಿಯಲ್ಲಿ ಕೊನೆಗೊಳಿಸುವುದು ಅಭಿಮಾನಾರ್ಹವಾದುದೇನೂ ಅಲ್ಲ. ಖಾತಮುನ್ನಬಿಯ್ಯೀನ್ ಆಗಿರುವ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ನುಬುವ್ವತ್ ಖತ್‌ಮ್ ಆಗಿದೆ ಎಂದು ಹೇಳಿದುದರ ಉದ್ದೇಶಾರ್ಥವೇನೆಂದರೆ ನುಬುವ್ವತ್ತಿಗೆ ಸಂಬಂಧಿಸಿದ ಎಲ್ಲ ಪರಿಪೂರ್ಣ ವೈಶಿಷ್ಟ್ಯಗಳು ಅವರಲ್ಲಿ ಸಮಾವೇಶಗೊಂಡು ಪೂರ್ಣವಾದುವು ಎಂದಾಗಿದೆ. ಆದಮ್‌ರಿಂದ ಮೊದಲುಗೊಂಡು ಮಸೀಹಿಬ್ನು ಮರ್‌ಯಮ್ ತನಕ ಪ್ರವಾದಿಗಳಿಗೆ ನೀಡಲಾದ ವಿವಿಧ ಪರಿಪೂರ್ಣ

ವೈಶಿಷ್ಟ್ಯತೆಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಜಮಾಯಿಸಲ್ಪಟ್ಟವು. ಈ ರೀತಿ ಅವರು ಎಲ್ಲಾ ಪರಿಪೂರ್ಣ ವೈಶಿಷ್ಟ್ಯಗಳನ್ನು ಹೊಂದಿದವರಾಗಿ ಖಾತಮುನ್ನಬಿಯ್ಯೀನ್ ಆದರು. ಇದೇ ರೀತಿ ವಿವಿಧ ಗ್ರಂಥಗಳಲ್ಲಿ ಅಡಕವಾಗಿದ್ದ ವಿವಿಧ ಶರೀಅತ್‌ಗಳಲ್ಲಿದ್ದವುಗಳು ಪವಿತ್ರ ಖುರ್‌ಆನಿನಲ್ಲಿ ಸೇರಿಕೊಂಡು ಕೊನೆಗೊಂಡವು ಮತ್ತು ಪವಿತ್ರ ಖುರ್‌ಆನ್ ಖಾತಮುಲ್ ಕುತುಬ್ ಎಂದು ಕರೆಯಲ್ಪಟ್ಟಿತು.

ವಾಸ್ತವಿಕ ವಿಷಯ ಮೇಲೆ ವಿವರಿಸಿದ ಹಾಗಿದೆ. ಆದರೆ ನಮ್ಮ ವಿರೋಧಿಗಳಿಗೆ ಅದರ ಬಗ್ಗೆ ಜ್ಞಾನವಿಲ್ಲ. ಜನರು ಮತಪಂಡಿತರ ಮುಷ್ಠಿಗಳಲ್ಲಿ ಸಿಲುಕಿದ್ದಾರೆ. ಮತಪಂಡಿತರು ಜನರನ್ನು ತಮ್ಮ ಹಿಡಿತದಿಂದ ಬಿಟ್ಟುಹೋಗಲು ಬಿಡಲಾರರು. ಮತಪಂಡಿತರನ್ನು ಹಿಂಬಾಲಿಸುವವರಿಗೆ ಈ ವಾಸ್ತವಿಕಾಂಶ ತಿಳಿದರೆ ಮತಪಂಡಿತರು ಧರ್ಮದ ಹೆಸರಲ್ಲಿ ನಡೆಸುವ ವ್ಯಾಪಾರ ಮುಂದೆ ಸಾಗಲಾರದು.

ಇಂದಿನ ಕಾಲದಲ್ಲಿ ಅಹ್ಮದಿಯಾ ಜಮಾಅತ್ ತನ್ನ ಎಲ್ಲ ಶಕ್ತಿ ಸಾಮರ್ಥ್ಯಗಳನ್ನೂ ಸಾಧನ ಸಂಪತ್ತುಗಳನ್ನೂ ಬಳಸಿಕೊಂಡು ಏಕದೇವ ವಿಶ್ವಾಸವನ್ನು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತ್ತಿನ ಹಿರಿಮೆಯನ್ನು ಲೋಕದ ಪ್ರತಿಯೊಂದು ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಬೀದಿಗಳಲ್ಲಿಯೂ ಪ್ರಚಾರ ಮಾಡುತ್ತಾರೆ, ಹರಡುತ್ತಾರೆ. ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖತ್‌ಮೆನುಬುವ್ವತ್ ಬಗ್ಗೆ ಮತ್ತು ಅವರಿಗೆ ಅವತೀರ್ಣವಾದ ಶರೀಅತ್ ಬಗ್ಗೆ ನಿಖರವಾದ ಜ್ಞಾನಗಳಿಸಿರುವವರು ನಾವಾಗಿದ್ದೇವೆ. ಅನ್ಯ ಧರ್ಮದವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಿರಿಮೆಯನ್ನು ಸ್ಪಷ್ಟವಾಗಿ ವಿವರಿಸಿ ಕೊಟ್ಟವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಿದ್ದಾರೆ. ಹಿಂದಿನ ಎಲ್ಲಾ ಪ್ರವಾದಿಗಳ ಉಪದೇಶಗಳು ಎಷ್ಟು ಬದಲಾಯಿಸಲ್ಪಟ್ಟಿವೆ ಎಂದರೆ ಆ ಪ್ರವಾದಿಗಳ ಸ್ಥಾನವೇನು ಅವರು ಸತ್ಯವಂತರೇ ಎಂದು ತಿಳಿಯಲು ಸಹ ಸಾಧ್ಯವಾಗುವುದಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ಹಿಂದಿನ ಪ್ರವಾದಿಗಳ ವಾಸ್ತವಿಕತೆ ಮತ್ತು ಅವರ ಸತ್ಯ ಸಂಧತೆಯನ್ನು ಪ್ರಕಟಿಸಿದರು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿ ಕೊಟ್ಟರು.

ಇಂದಿನ ಕಾಲದ ಮತಪಂಡಿತರು ಪರಸ್ಪರ ಒಬ್ಬರಿನ್ನೊಬ್ಬರ ವಿರುದ್ಧ ದೋಷಾರೋಪ ಮಾಡುತ್ತಾರೆ. ಆದರೆ ಅನ್ಯಧರ್ಮದವರಿಗೆ ಆ ಧರ್ಮದವರ ನೈಜ ಮುಖವನ್ನೂ ಅವರ ಬಲಹೀನತೆಗಳನ್ನೂ ತೋರಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠತೆಯನ್ನು ಸಾಬೀತುಗೊಳಿಸುವ ಧೈರ್ಯ ಅವರಿಗಿಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿದ ತರಬೇತಿ ಮತ್ತು ಜ್ಞಾನದ ಮೂಲಕ ಅಹ್ಮದಿಯಾ ಜಮಾಅತ್ ಮಾತ್ರ ಈ ಕೆಲಸ ಮಾಡುತ್ತಿದೆ. ಹೀಗಿದ್ದರೂ ಅವರ ದೃಷ್ಟಿಯಲ್ಲಿ ನಾವು ಕಾಫಿರ್ ಮತ್ತು ಅವರು ಮೂಮಿನ್ ಆಗಿದ್ದಾರೆ.

ಅಲ್ಲಾಹನ ಅನುಗ್ರಹದಿಂದ ನಾವು ಮುಸ್ಲಿಮರಾಗಿದ್ದೇವೆ. ನಾವು ಅಲ್ಲಾಹನ ಗ್ರಂಥವಾದ ಪವಿತ್ರ ಖುರ್‌ಆನನ್ನು ನಂಬುತ್ತೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನ ನಬಿ ಮತ್ತು ರಸೂಲ್ ಎಂದೂ ನಂಬುತ್ತೇವೆ. ಅವರು ಅತ್ಯುತ್ತಮ ಧರ್ಮವನ್ನು ಸ್ಥಾಪಿಸಿದರು ಎಂದು ಸಹ ನಂಬುತ್ತೇವೆ. ಅವರು ಖಾತಮುನ್ನಬಿಯ್ಯೀನ್ ಎಂದು ಸಹ ನಾವು ನಂಬುತ್ತೇವೆ. ಅವರು ಆಗಮಿಸಿದ ನಂತರ ಅವರ ಅನುಗ್ರಹದಿಂದ ತರಬೇತಿ ಪಡೆದವರ ಹೊರತು ಬೇರೆ ಯಾವ ಪ್ರವಾದಿಯೂ ಆಗಮಿಸಲಾರ ಎಂದು ನಾವು ನಂಬುತ್ತೇವೆ. ಪವಿತ್ರ ಖುರ್‌ಆನಿಗೆ ಏನನ್ನಾದರೂ ಯಾರಾದರೂ ಸೇರಿಸಿದ್ದರೆ ಅಥವಾ ಅದರಿಂದ ಏನನ್ನಾದರೂ ತೆಗೆದು ಹಾಕಿದ್ದರೆ ಅವನು ಶೈತಾನ್ ಫಾಜಿರ್ ಆಗಿದ್ದಾನೆ. ನಮ್ಮ ಬಳಿ ಖತ್‌ಮೆ ನುಬುವ್ವತ್ ಎಂಬುದರ ತಾತ್ಪರ್ಯವು ಎಲ್ಲಾ ಪ್ರವಾದಿಗಳಿಗಿಂತಲೂ ಸಂದೇಶವಾಹಕರಿಗಿಂತಲೂ ಶ್ರೇಷ್ಠರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ನುಬುವ್ವತ್ತಿಗೆ ಸಂಬಂಧಿಸಿದ ಎಲ್ಲಾ ಪರಿಪೂರ್ಣತೆಗಳು ಸೇರಿಕೊಂಡು ಕೊನೆಗೊಂಡವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಯಾಗಿದ್ದುಕೊಂಡು ಅವರನ್ನು ಪರಿಪೂರ್ಣವಾಗಿ ಅನುಸರಿಸುವವರಾಗಿ, ಎಲ್ಲಾ ಆಧ್ಯಾತ್ಮಿಕ ಅನುಗ್ರಹಗಳನ್ನು ಅವರಿಂದ ಪಡೆದುಕೊಂಡು ಅವರ ಪ್ರಕಾಶದಿಂದ ಪ್ರಕಾಶ ಪಡೆದವರು ಮಾತ್ರ ನಬಿ ಆಗ ಬಲ್ಲರು ಎಂದು ನಾವು ನಂಬುತ್ತೇವೆ. ಇಂತಹ ಸ್ಥಾನ ಪಡೆಯುವುದರಲ್ಲಿ ಅನ್ಯತೆ ಇಲ್ಲ. ಇದು ಪ್ರತ್ಯೇಕವಾದೊಂದು ನುಬುವ್ವತ್ ಅಲ್ಲ. ಇದರ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇನ್ನೊಂದು ಕನ್ನಡಿಯಲ್ಲಿ ಪ್ರತ್ಯಕ್ಷರಾದ ಹಾಗಿದೆ. ಅಲ್ಲಾಹನು ಕನ್ನಡಿಯಲ್ಲಿ ತೋರಿಸಿದ ತನ್ನ ಚಿತ್ರದ ಬಗ್ಗೆ ಯಾವನೇ ಆಗಲಿ ನಾಚಿಕೆ ಪಡಲಾರ. ಏಕೆಂದರೆ ಶಿಷ್ಯರನ್ನಾಗಲಿ ಪುತ್ರರನ್ನಾಗಲಿ ತೋರಿಸಿದಾಗ ಯಾರೂ ನಾಚಿಕೆಯನ್ನು ಹೊಂದುವುದಿಲ್ಲ. ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅನುಗ್ರಹ ಪಡೆದು ಅವರಲ್ಲಿಯೇ ತಲ್ಲೀನರಾಗಿ ಆಗಮಿಸುವವರು ವಾಸ್ತವಿಕವಾಗಿ ಅವರೇ ಆಗಿದ್ದಾರೆ. ಹಾಗೆ ಆಗಮಿಸುವವರು ಅವರಲ್ಲಿಯೇ ತಲ್ಲೀನರಾಗಿ, ಅವರ ವರ್ಣದಲ್ಲಿಯೇ ವರ್ಣರಂಜಿತರಾಗಿ ಆಗಮಿಸುವವರು ಅವರದೇ ಚಾದರನ್ನು ಹೊದ್ದುಕೊಂಡಿರುತ್ತಾರೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದಲೇ ತಮ್ಮ ಆಧ್ಯಾತ್ಮಿಕ ಅಸ್ತಿತ್ವವನ್ನು ಪಡೆದುಕೊಂಡಿರುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ

ಅನುಗ್ರಹದಿಂದಲೇ ಅವರು ಪರಿಪೂರ್ಣತೆಗೆ ತಲಪಿರುತ್ತಾರೆ. ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹಗಳಿಗೆ ಸಾಕ್ಷಿಯಾಗಿದೆ. ಜನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೌಂದರ್ಯವನ್ನು ಅವರ ಶಿಷ್ಯರ ಉಡುಗೆ ತೊಡುಗೆಯಲ್ಲಿ ಕಾಣುತ್ತಾರೆ. ಅವರು ತಮ್ಮ ಪರಿಪೂರ್ಣ ಪ್ರೀತಿ ಮತ್ತು ಪರಿಶುದ್ಧತೆಯ ಕಾರಣದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ತಲ್ಲೀನರಾದರು. ಇದಕ್ಕೆ ವಿರುದ್ಧವಾಗಿ ವಾಗ್ವಾದ ನಡೆಸುವುದು ಅಜ್ಞಾನವಾಗಿದೆ. ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪುತ್ರ ಸಂತಾನ ಹೀನರೆಂಬ ಆಕ್ಷೇಪಕ್ಕೆ ಉತ್ತರವೂ ಅವರು ಅಲ್ಲಾಹನಿಂದ ಆಗಮಿಸಿದವರೆಂಬುದಕ್ಕೆ ಸಾಕ್ಷ್ಯಾಧಾರವೂ ಆಗಿರುತ್ತದೆ. ಚಿಂತಿಸುವವರಿಗೆ ಹೆಚ್ಚಿನ ವಿವರಣೆ ಆವಶ್ಯಕವಾಗಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶಾರೀರಿಕವಾಗಿ ಯಾವ ಪುರುಷನ ಪಿತನೂ ಅಲ್ಲ. ಆದರೆ ಅವರು ತಮ್ಮ ಸಂದೇಶವಾಹಕತ್ವದ ಅನುಗ್ರಹದ ಮೂಲಕ ಅನುಗ್ರಹ ನೀಡಿದ ಕಾರಣ ಆಧ್ಯಾತ್ಮಿಕತೆಯಲ್ಲಿ ಪರಿಪೂರ್ಣತೆ ಗಳಿಸಿದ ಪ್ರತಿಯೊಬ್ಬನ ಪಿತ ಅವರಾಗಿದ್ದಾರೆ. ಅವರು ಎಲ್ಲಾ ಪ್ರವಾದಿಗಳ ಖಾತಮ್ ಹಾಗೂ ಅಲ್ಲಾಹನ ಸಾಮೀಪ್ಯ ಗಳಿಸಿದ ಎಲ್ಲರ ನಾಯಕರಾಗಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುದ್ರೆಯ ಅಚ್ಚನ್ನು ಹೊಂದಿರುವವರೂ ಅವರ ನಡೆವಳಿಕೆಗಳನ್ನು ಪೂರ್ಣವಾಗಿ ಅನುಸರಿಸುವವರೂ ಹೊರತು ಬೇರೆ ಯಾರೂ ಅಲ್ಲಾಹನ ಆ ಸ್ಥಾನದಲ್ಲಿ ಪ್ರವೇಶಿಸಲಾರರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರವಾದಿತ್ವವನ್ನು ಅಂಗೀಕರಿಸದಿದ್ದರೆ ಮತ್ತು ಅವರು ಸ್ಥಾಪಿಸಿದ ಧರ್ಮದಲ್ಲಿ ಸ್ಥಿರಚಿತ್ತತೆಯಿಂದ ಇರದಿದ್ದರೆ ಯಾವುದೇ ಆರಾಧನೆ ಮತ್ತು ಕರ್ಮ ಅಲ್ಲಾಹನಿಂದ ಅಂಗೀಕಾರ ಪಡೆಯಲಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ದೂರ ಸರಿದವನು, ತನ್ನ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾಗಿ ಅವರನ್ನು ಅನುಸರಿಸದೆ ಇರುವವನು ನಾಶವಾಗುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಯಾವುದೇ ಶರೀಅತ್ ಬರಲಾರದು. ಅವರ ಗ್ರಂಥವನ್ನೂ ಅವರ ಆಜ್ಞೆಗಳನ್ನೂ ರದ್ದುಗೊಳಿಸಲು ಯಾರಿಗೂ ಅಧಿಕಾರವಿಲ್ಲ. ಅವರ ಪವಿತ್ರ ನುಡಿಗಳನ್ನು ಬದಲಾಯಿಸಲು ಯಾರಿಗೂ ಸಾಧ್ಯವಿಲ್ಲ. ಯಾವುದೇ ಮಳೆ ಅವರು ಸುರಿಸುವ ಧಾರಾಕಾರ ವರ್ಷಧಾರೆಯ ಹಾಗೆ ಇರಲಾರದು. ಪವಿತ್ರ ಖುರ್ಆನಿನ ಆಧ್ಯಾತ್ಮಿಕ ಮಳೆಯಿಂದ ಮತ್ತು ಪವಿತ್ರ ಖುರ್ಆನನ್ನು ಅನುಸರಿಸುವುದರಿಂದ ಸ್ವಲ್ಪ ಮಾತ್ರ ದೂರ ಸರಿದವನು ಈಮಾನಿನ ವಲಯದಿಂದ ಹೊರಹಾಕಲ್ಪಟ್ಟವನಾಗಿದ್ದಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರದೆಂದು ಸಾಬೀತಾಗಿರುವ ವಿಷಯಗಳನ್ನು ಅನುಸರಿಸದೆ ಇರುವ ತನಕ ಯಾರಿಗೂ ಜಯಶಾಲಿಯಾಗಲು ಖಂಡಿತವಾಗಿಯೂ ಸಾಧ್ಯವಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳಿಂದ ಯಾವುದಾದರೂ ಚಿಕ್ಕದಾದೊಂದು ಉಪದೇಶವನ್ನಾದರೂ ಬಿಟ್ಟುಬಿಡುವವನು ಪಥಭ್ರಷ್ಟನಾಗುತ್ತಾನೆ. ಸರ್ವಶ್ರೇಷ್ಠ ಮಾನವರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ತರಬೇತಿ ಪಡೆಯದೆ, ಅವರ ಅತ್ಯುತ್ತಮ ನಡೆವಳಿಕೆಯನ್ನು ಅನುಸರಿಸದೆ ತನಗೆ ನುಬುವ್ವತ್ ಲಭಿಸಿದೆ ಎಂದು ವಾದಿಸುವವನು ನಾಶವಾಗುವನು. ಓರ್ವ ಪ್ರವಾದಿತ್ವ ವಾದಿ, ತಾನು ಗಳಿಸಿದ್ದೆಲ್ಲವೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರವರ ಶಿಷ್ಯತ್ವದಿಂದ ಲಭಿಸಿದೆ ಎಂದು ಹೇಳದೆ, ಅವರ ತೋಟದ ಒಂದು ಹಣ್ಣಾಗಿರದೆ, ಪೈಗಂಬರರು ಸುರಿಸಿದ ಧಾರಾಕಾರ ಮಳೆಯ ಒಂದು ಬಿಂದು ಮಾತ್ರವಾಗಿದ್ದೇನೆಂದು ವಾದಿಸದೆ, ಆ ಮಹಾ ಪ್ರಕಾಶದ ಒಂದು ಕಿರಣ ಮಾತ್ರವಾಗಿದ್ದೇನೆ ಎಂದೂ ವಾದಿಸದವನು ಶಾಪಗ್ರಸ್ತನಾಗಿದ್ದಾನೆ. ಅವನ ಮೇಲೆ, ಅವನ ಸಂಗಡಿರ ಮೇಲೆ, ಅವನಿಗೆ ಸಹಾಯ ನೀಡುವವರ ಮೇಲೆ ಅಲ್ಲಾಹನ ಶಾಪ ಸುರಿಯುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಆಕಾಶದ ಕೆಳಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೊರತು ನಮಗೆ ಬೇರೆ ಯಾವ ಪ್ರವಾದಿಯೂ ಇಲ್ಲ. ಪವಿತ್ರ ಖುರ್ಆನಿನ ಹೊರತು ನಮಗೆ ಬೇರೆ ಯಾವ ಗ್ರಂಥವೂ ಇಲ್ಲ. ಯಾರು ಇದನ್ನು ವಿರೋಧಿಸುತ್ತಾನೋ ಅವನು ತನ್ನನ್ನು ನರಕದ ಕಡೆಗೆ ಎಳೆದುಕೊಂಡು ಹೋಗುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅನೇಕ ಸ್ಥಳಗಳಲ್ಲಿ ಖತ್ಮೆನುಬುವ್ವತ್ ಬಗ್ಗೆ, ಅದರ ಸ್ಥಾನದ ಬಗ್ಗೆ ಮತ್ತು ಅದರೊಂದಿಗೆ ತನ್ನ ಸ್ಥಾನದ ಬಗ್ಗೆ ವಿವರಿಸಿದ್ದಾರೆ.

ಅಹ್ಮದಿಯರ ವಿರುದ್ಧ ಮಾಡಲಾಗುತ್ತಿರುವ ಇನ್ನೊಂದು ಆರೋಪವು ಅವರು ದೇಶಕ್ಕೆ ಸೇವೆ ಸಲ್ಲಿಸುವುದಿಲ್ಲ, ಅವರು ದೇಶಕ್ಕೆ ನಿಷ್ಠರಾಗಿಲ್ಲ ಎಂಬುದಾಗಿದೆ. ಆದರೆ ನಾನು ಪೂರ್ಣ ಧೈರ್ಯದಿಂದ ಹೇಳಬಲ್ಲೆನು– ಇಂದಿನ ಕಾಲದಲ್ಲಿ ಅಹ್ಮದಿಯರು ಮಾತ್ರ ಪಾಕಿಸ್ಥಾನದಲ್ಲಿ **ಹುಬ್ಬುಲ್ ವತನಿ ಮಿನಲ್ ಈಮಾನ್.** (ದೇಶಪ್ರೇಮ ವಿಶ್ವಾಸದ ಒಂದು ಭಾಗವಾಗಿದೆ) ಎಂದು ನಂಬುವವರೂ ಅದರ ಪ್ರಕಾರ ಕೆಲಸ ಮಾಡುವವರೂ ಆಗಿದ್ದಾರೆ. ಅವರು ತಮ್ಮ ಜೀವವನ್ನೂ ಸಂಪತ್ತನ್ನೂ ದೇಶಕ್ಕೋಸ್ಕರ ತ್ಯಾಗ ಮಾಡಿದವರೂ ತ್ಯಾಗ ಮಾಡುತ್ತಿರುವವರೂ ಆಗಿದ್ದಾರೆ. ಅವರು ರಾಜಕೀಯ ವ್ಯಾಪಾರ ನಡೆಸಲು ಕೇವಲ ಭಾಷಣಗಳನ್ನು ಮಾತ್ರ ಮಾಡುವವರಲ್ಲ. ಅಹ್ಮದಿಯರಾದ ನಮಗೆ ರಾಜಕೀಯದೊಂದಿಗೆ ಯಾವ ಸಂಬಂಧವೂ ಇಲ್ಲ. ನಾವು ಧರ್ಮಕ್ಕೋಸ್ಕರ ಜೀವಾರ್ಪಣೆ ಮಾಡುವವರಾಗಿದ್ದೇವೆ. ಆದರೆ ಧರ್ಮದ ಹೆಸರಿನಲ್ಲಿ ರಾಜಕೀಯಕ್ಕೆ ಹೊಳಪು ನೀಡುವರಲ್ಲ. ನಾವು ಧರ್ಮದ ಹೆಸರಿನಲ್ಲಿ ಹತ್ಯೆ ಮಾಡುವವರೂ ಅಲ್ಲ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ

ವಸಲ್ಲಮರನ್ನು **ಖಾತಮುನ್ನಬಿಯ್ಯೀನ್** ಎಂದು ಹೃತ್ಪೂರ್ವಕವಾಗಿ ನಂಬುವವರಾಗಿದ್ದೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವ ಕಾಪಾಡಲಿಕ್ಕೋಸ್ಕರ ನಾವು ಪ್ರತಿಯೊಂದು ರೀತಿಯ ಬಲಿದಾನಗಳನ್ನು ನೀಡುತ್ತಿದ್ದೇವೆ ಮತ್ತು ಮುಂದೆ ಸಹ ನೀಡಲು ಸಿದ್ಧರಾಗಿದ್ದೇವೆ. ಇನ್‌ಶಾ ಅಲ್ಲಾಹ್, ನಾವು ಬಲಿದಾನ ನೀಡುತ್ತಾ ಮುಂದುವರಿಯುವೆವು. ಪಾಕಿಸ್ಥಾನದ ಅಹ್ಮದಿಯರು ಕಡ್ಡಾಯವಾಗಿ ಯಾವಾಗಲೂ ಈ ರೀತಿ ಪ್ರಾರ್ಥಿಸುತ್ತಾ ಇರಬೇಕು: ಯಾವ ದೇಶಕ್ಕೋಸ್ಕರ ಅಹ್ಮದಿಯರು ದೊಡ್ಡ ಬಲಿದಾನಗಳನ್ನು ನೀಡಿರುವರೋ ಆರಂಭದಿಂದ ಇಂದಿನ ತನಕ ಬಲಿದಾನ ನೀಡುತ್ತಿರುವರೋ ಆ ದೇಶವನ್ನು ಅಲ್ಲಾಹನು ಯಾವಾಗಲೂ ಸಂರಕ್ಷಿಸುವವನಾಗಲಿ. ದೌರ್ಜನ್ಯಗಾರರೂ ನಿರಂಕುಶ ಪ್ರಭುಗಳೂ ಆಗಿರುವ ರಾಜಕೀಯ ನಾಯಕರಿಂದಲೂ ಸ್ವಾರ್ಥ ಹಿತಾಸಕ್ತರಾದ ಮತಪಂಡಿತರಿಂದಲೂ ಅದನ್ನು ಅಲ್ಲಾಹನು ರಕ್ಷಿಸಲಿ. ಲೋಕದ ಸ್ವತಂತ್ರ ವೈಭವಶಾಲಿ ದೇಶಗಳೊಂದಿಗೆ ಪಾಕಿಸ್ಥಾನವೂ ಗಣಿಸಲ್ಪಡುವಂತಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 13-10-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email*:** *khutuba.kannada@gmail.com*



**You can find all the Sermons archived at**: www.alislam.org/friday-sermon